ಹೋಗಬೇಡಿ. ಈಗ additional seats ಗೆ ನಾವು ಅವಕಾಶ ಮಾಡಿಕೊಳ್ಳುತ್ತಿದ್ದೇವೆ. Stamp duty ಯಲ್ಲಿ ನಮ್ಮ pendings ಹಾಗೆಯೇ ಉಳಿದುಕೊಂಡಿವೆ. Atleast, ನಮಗೆ stamp duty ಯನ್ನು ನಮಗೆ ನೀವು divert ಮಾಡಿಕೊಟ್ಟು, ಈ additional seats ಗೆ ಈಗೇನು ಒತ್ತಡ ಬರುತ್ತಿದೆ ಅದಕ್ಕೆ ಅವಕಾಶ ಮಾಡಿಕೊಡಬೇಕು. ಹಾಸ್ಟೆಲ್‌ನಲ್ಲಿ ಜಾಗ ಕೂಡ ಇದೆ, wardens ಕೂಡ ಅದಕ್ಕೆ agree ಮಾಡುತ್ತಾರೆ. ಅದಕ್ಕೆ ತಾತ್ಕಾಲಿಕವಾಗಿ ಅವಕಾಶ ಮಾಡಿಕೊಡಿ. Central funds ನಿಂದ reimbursement ಮಾಡಿಕೊಳ್ಳುವ ಬಗ್ಗೆ ನಾವು ಮಾತನಾಡಿದೆವು. ಅದಕ್ಕೆಲ್ಲಾ ನೀವು subsequent ಆಗಿ entire seats ಗೆ ಮಾಡಿಕೊಳ್ಳಿ. ಈಗ applications ಇವೆ. ಅಲ್ಲಿ ಜಾಗ ಕೂಡ ಇದೆ. ದಯಮಾಡಿ ತಾವು ಅದಕ್ಕೆ ಆದೇಶ ಮಾಡಿದರೆ ಅನುಕೂಲವಾಗುತ್ತದೆ. ಏಕೆಂದರೆ, ಸಮಾಜ ಕಲ್ಯಾಣ ಇಲಾಖೆ ಮಕ್ಕಳಿಗೆ ಅನುಕೂಲ ಮಾಡುವಂತಹ ಇಲಾಖೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆಗೆ ಸಮಾಲೋಚನೆ ಮಾಡುತ್ತೇನೆ. ಇದಕ್ಕೆ ಹಣಕಾಸಿನ ಯಾವುದೇ ತೊಂದರೆ ಇಲ್ಲ. ಈ ಬಾರಿ SSLC ಯಲ್ಲಿ ಒಳ್ಳೆಯ results ಬಂದಿದೆ. ಹಾಸ್ಟೆಲ್‌ಗಳ ಸಂಖ್ಯೆಯನ್ನೂ ಕೂಡ ನಾವು ಹೆಚ್ಚಿಸುತ್ತಿದ್ದೇವೆ. ಅದಕ್ಕೆ ಅಗತ್ಯ ಇರುವಂತಹ ಎಲ್ಲಾ ವ್ಯವಸ್ಥೆಯನ್ನೂ ಮಾಡಲಿಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಂಡು ತತ್‌ಕ್ಷಣವೇ ನಾವು ಮಾಡುತ್ತೇವೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಸರ್ಕಾರಿ ಐ.ಐ.ಟಿ. ಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು

169 (910) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕು ಮಾಲಾಡಿ ಎಂಬಲ್ಲಿರುವ ಐ.ಟಿ.ಐ. ಸಂಸ್ಥೆಯಲ್ಲಿ ಖಾಲಿ ಇರುವ ವಿವಿಧ ವರ್ಗಗಳ ಹುದ್ದೆಗಳು ಎಷ್ಟು? ಮತ್ತು ಅವುಗಳನ್ನು ಯಾವಾಗ ತುಂಬಲಾಗುವುದು.

ಆ) ಈ ತರಬೇತಿ ಸಂಸ್ಥೆಯಲ್ಲಿ ಬಹುಭಾಗದ ಹುದ್ದೆಗಳು ಖಾಲಿ ಇದ್ದು ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳನ್ನು ನಡೆಸಲು ಸಾಧ್ಯವೇ ಇಲ್ಲದ ಪರಿಸ್ಥಿತಿಯನ್ನು ಸರ್ಕಾರ ಗಮನಿಸಿದೆಯೇ? ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ದೀರ್ಘ ಕಾಲದಿಂದ ಗೌರವ ಶಿಕ್ಷಕರಾಗಿರುವವರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು? .

ಈ) ಈ ಸಂಸ್ಥೆಯ ಕಟ್ಟಡ ನಿರ್ಮಾಣದ ಕುರಿತಾದ ಪ್ರಗತಿಯ ವಿವರಗಳೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಬೆಳ್ತಂಗಡಿ ತಾಲ್ಲೂಕು ಮಾಲಾಡಿಯಲ್ಲಿರುವ ಸರ್ಕಾರಿ ಕೈ.ತ.ಸಂಸ್ಥೆಗೆ ಒಟ್ಟು 17 ಹುದ್ದೆಗಳನ್ನು ಸೃಜಿಸಲಾಗಿದೆ. ಅವುಗಳ ವಿವರಗಳು ಈ ಕೆಳಗಿನಂತಿವೆ.

	ಮಂಜೂರಾತಿ	ಭರ್ತಿಯಾಗಿರುವ ವಿವರ	ಖಾಲಿ ಹುದ್ದೆಗಳು
ಪ್ರಾಚಾರ್ಯರು ದಜನ್ನ–2	– 01 ಸಂ.	–	01
ತರಬೇತಿ ಅಧಿಕಾರಿ	– 01 "	–	01
ಅಧೀಕ್ಷಕರು	– 01 "	–	01
ಕಿರಿಯ ತರಬೇತಿ ಅಧಿಕಾರಿ	– 06 "	04	02
ಪ್ರಥಮ ದರ್ಜೆ ಸಹಾಯಕ	– 02 "	02	00
ದ್ವಿತೀಯ ದರ್ಜೆ ಸಹಾಯಕ	– 01 "	00	01
ಬೆರಳಚ್ಚುಗಾರರು	– 01 "	00	01
ಕಾರ್ಯಗಾರ ಸಹಾಯಕ	– 02 "	00	02
ಸಮೂಹ–ಡಿ	– 02 "	01	01
ಒಟ್ಟು ಹುದ್ದೆಗಳು	**– 17**	**07**	**10**

10 ಖಾಲಿ ಹುದ್ದೆಗಳನ್ನು ನಿಯೋಜನೆ ಅಥವಾ ಕೆಪಿಎಸ್‌ಸಿ ಮತ್ತು ಮುಂಬಡ್ತಿ ಮೂಲಕ ತಕ್ಷಣ ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಆ) ಖಾಲಿ ಇರುವ ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಯನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ತುಂಬಲು ಕ್ರಮ ವಹಿಸಲಾಗುತ್ತಿದೆ. ಅಲ್ಲಿಯವರೆವಿಗೂ ಅತಿಥಿ ಬೋಧಕರ ಉಪನ್ಯಾಸಕರ ಸೇವೆಯನ್ನು ಉಪಯೋಗಿಸಿಕೊಳ್ಳುವ ಮೂಲಕ ಮತ್ತು ನಿಯೋಜನೆ ಮೂಲಕ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ.

ಇ) ಇಲ್ಲ.

ಈ) ಈ ಸಾಲಿನ ಆಯವ್ಯಯದಲ್ಲಿ ಕೈ.ತ. ಸಂಸ್ಥೆಗಳ ಹೊಸ ಕಟ್ಟಡ ನಿರ್ಮಿಸಲು 300 ಲಕ್ಷ ಮತ್ತು ಪ್ರಗತಿಯಲ್ಲಿರುವ ಕಟ್ಟಡಗಳನ್ನು ಪೂರೈಸಲು 300 ಲಕ್ಷಗಳನ್ನು ಒದಗಿಸಲಾಗಿದೆ. ಅನುದಾನ ಲಭ್ಯತೆ ಅನುಗುಣವಾಗಿ ಕೈ.ತ. ಸಂಸ್ಥೆ ಕಟ್ಟಡವನ್ನು ಹಂತ ಹಂತವಾಗಿ ಪೂರೈಸಲಾಗುವುದು.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿನ ಮಾಲಾಡಿ ಎಂಬಲ್ಲಿ ITI ಪ್ರಾರಂಭವಾಗಿ ಸುಮಾರು ಎಂಟು ವರ್ಷಗಳಾಯಿತು. ಅಲ್ಲಿ ಒಟ್ಟು 17 ಮಂಜೂರಾತಿಯಾದಂತಹ ಹುದ್ದೆಗಳಿವೆ. ಅದರಲ್ಲಿ ಕೇವಲ 7 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, 10 ಹುದ್ದೆಗಳು ಖಾಲಿ ಇವೆ. ಅಲ್ಲಿ ಪ್ರಾಚಾರ್ಯರ ಹುದ್ದೆ ಖಾಲಿ ಇರುವುದರಿಂದ ಅಲ್ಲಿ ಸರಿಯಾದಂತಹ ಶಿಕ್ಷಣ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಆದಷ್ಟು ಶೀಘ್ರದಲ್ಲೇ ಖಾಲಿ ಇರುವಂತಹ 10 ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಅಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನ ಮಾಲಾಡಿ ITI ನಲ್ಲಿ 10 ಹುದ್ದೆಗಳು ಖಾಲಿ ಇವೆ. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಅಲ್ಲಿರತಕ್ಕಂಥ ಪ್ರಾಚಾರ್ಯರ ಹುದ್ದೆ ಕೂಡ ಖಾಲಿ ಇದೆ. ಈ 10 ಖಾಲಿ ಹುದ್ದೆಗಳನ್ನು ಲೋಕಸೇವಾ ಆಯೋಗದ ಮೂಲಕ

ತುಂಬಲಿಕ್ಕೆ ಈಗಾಗಲೇ ನಾವು ಕೋರಿದ್ದೇವೆ. ಅತಿ ಶೀಘ್ರದಲ್ಲೇ ಅವುಗಳನ್ನು ನಾವು ತುಂಬುತ್ತೇವೆ. ಖಾಲಿ ಇರುವ ಪ್ರಾಚಾರ್ಯರ ಹುದ್ದೆಯನ್ನು ತುಂಬಲು ತಕ್ಷಣವೇ deputation ಮೂಲಕ ಅಲ್ಲಿಗೆ ಯಾರನ್ನಾದರೂ ಕಳುಹಿಸಿಕೊಡಲಿಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ಆ ಐಟಿಐ ಸಂಸ್ಥೆ ಆರಂಭವಾಗಿ ಎಂಟು ವರ್ಷಗಳಾದವು. ಈಗ ಅಲ್ಲಿ ಕಟ್ಟಡದ ಅವಶ್ಯಕತೆ ಇದೆ. ಆ ಐಟಿಐ ಸಂಸ್ಥೆ ಈಗ ಪ್ರಾಥಮಿಕ ಶಾಲೆಯೊಂದರಲ್ಲಿ ನಡೆಯುತ್ತಿದೆ. ಅದರಿಂದ ಶಾಲೆಗೂ ಕೂಡ ತೊಂದರೆಯಾಗುತ್ತಿರುವಂತಹ ಈ ಒಂದು ಸಂದರ್ಭದಲ್ಲಿ, ಅಲ್ಲಿ ಕಟ್ಟಡ ನಿರ್ಮಾಣದ ಕೆಲಸ ಪ್ರಾರಂಭವಾಗಬೇಕು ಎಂದು ನಮ್ಮ ವಿನಂತಿ ಇದೆ. 300 ಲಕ್ಷ ರೂಪಾಯಿಗಳನ್ನು ಪೂರೈಸಿದ್ದೇವೆ, ಅನುದಾನ ಲಭ್ಯತೆಯ ಆಧಾರದ ಮೇಲೆ ಕಟ್ಟಡವನ್ನು ಹಂತ ಹಂತವಾಗಿ ನಾವು ಮಾಡುತ್ತೇವೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಹೀಗೆ ಹೇಳಿದರೆ ನಮಗೆ ಅನುಮಾನ ಬರುತ್ತದೆ. 300 ಲಕ್ಷ ರೂಪಾಯಿಗಳಿಗೆ ಮಂಜೂರಾತಿ ಆಗಿದ್ದರೆ, ತಕ್ಷಣದಿಂದ ಕೆಲಸ ಪ್ರಾರಂಭ ಮಾಡಲಿಕ್ಕೆ ಸರ್ಕಾರ ಅನುಮತಿಯನ್ನು ಕೊಡಬೇಕಾಗಿದೆ. 300 ಲಕ್ಷ ರೂಪಾಯಿಗಳು ಅವರ budget estimate ಆಗಿರಬಹುದು, ಅದನ್ನು ತಕ್ಷಣ ಬಿಡುಗಡೆ ಮಾಡಿ, ಆದಷ್ಟು ಶೀಘ್ರದಲ್ಲಿ ಆ ಕಟ್ಟಡ ನಿರ್ಮಾಣವಾಗುವಂತೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈಗ applications ಇವೆ. ಅಲ್ಲಿ ಜಾಗ ಕೂಡ ಇದೆ. ದಯಮಾಡಿ ತಾವು ಅದಕ್ಕೆ ಆದೇಶ ಮಾಡಿದರೆ ಅನುಕೂಲವಾಗುತ್ತದೆ. ಏಕೆಂದರೆ, ಸಮಾಜ ಕಲ್ಯಾಣ ಇಲಾಖೆ ಮಕ್ಕಳಿಗೆ ಅನುಕೂಲ ಮಾಡುವಂತಹ ಇಲಾಖೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆಗೆ ಸಮಾಲೋಚನೆ ಮಾಡುತ್ತೇನೆ. ಇದಕ್ಕೆ ಹಣಕಾಸಿನ ಯಾವುದೇ ತೊಂದರೆ ಇಲ್ಲ. ಈ ಬಾರಿ SSLC ಯಲ್ಲಿ ಒಳ್ಳೆಯ results ಬಂದಿದೆ. ಹಾಸ್ಟೆಲ್‌ಗಳ ಸಂಖ್ಯೆಯನ್ನೂ ಕೂಡ ನಾವು ಹೆಚ್ಚಿಸುತ್ತಿದ್ದೇವೆ. ಅದಕ್ಕೆ ಅಗತ್ಯ ಇರುವಂತಹ ಎಲ್ಲಾ ವ್ಯವಸ್ಥೆಯನ್ನೂ ಮಾಡಲಿಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಂಡು ತತ್‌ಕ್ಷಣವೇ ನಾವು ಮಾಡುತ್ತೇವೆ.

6.00 P.M.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ 104 ಕೈಗಾರಿಕಾ ತರಬೇತಿ ಕೇಂದ್ರಗಳು ಸರ್ಕಾರದ ವತಿಯಿಂದ ನಡೆಯುತ್ತಿವೆ, ಅದರಲ್ಲಿ ಸುಮಾರು 56 ಕೈಗಾರಿಕಾ ತರಬೇತಿ ಕೇಂದ್ರಗಳು ಸರ್ಕಾರದ ಸ್ವಂತ ಕಟ್ಟಡದಲ್ಲಿವೆ. ಉಳಿದವುಗಳನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದೇವೆ. ಮಾನ್ಯ ಸದಸ್ಯರು ಜಾಗವಿದೆ, ಕೇಂದ್ರವನ್ನು ನಿರ್ಮಿಸಲು ಹಣವನ್ನು ಒದಗಿಸಿಕೊಡಿ ಎಂದು ಹೇಳಿದರು. ನಾನು ಹೇಳಿದಂತೆ ಈಗಾಗಲೇ ಪ್ರಸಕ್ತ

ಸಾಲಿನಲ್ಲಿ ಮೂರು ಕೋಟಿ ರೂಪಾಯಿಗಳನ್ನು ಕಟ್ಟಡಕ್ಕೋಸ್ಕರ ಕೊಡಲಾಗಿದೆ, ಮತ್ತು ಪ್ರಗತಿಯಲ್ಲಿರುವ ಕಟ್ಟಡಗಳಿಗೆ ಮೂರು ಕೋಟಿ ರೂಪಾಯಿಗಳನ್ನು ಕೊಡಲಾಗಿದೆ, ಅವಶ್ಯಕತೆಯನ್ನು ನೋಡಿಕೊಂಡು ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ವಿಟ್ಲಲದಲ್ಲೂ ಕೂಡ ಒಂದು ಕೈಗಾರಿಕಾ ತರಬೇತಿ ಕೇಂದ್ರವಿದೆ, ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಲ್ಲಿಗೆ ಕಟ್ಟಡ ಹಾಗೂ ಸಿಬ್ಬಂದಿಯನ್ನು ಒದಗಿಸಿಕೊಡಬೇಕು ಎಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಈಗಾಗಲೇ ಹೇಳಿದ್ದೇನೆ. ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಅತಿ ಶೀಘ್ರವಾಗಿ ಸಿಬ್ಬಂದಿಯನ್ನು ತುಂಬಲು ನಾವು ಪ್ರಯತ್ನ ಮಾಡುತ್ತೇವೆ. ಖಾಲಿ ಇದ್ದರೂ ಕೂಡ ಸಹಿತ ಈಗ ಅಲ್ಲಿ ಗೆಸ್ಟ್ ಲೆಕ್ಚರ್ಸ್ ಕೆಲಸ ಮಾಡುತ್ತಿದ್ದಾರೆ, ಬೋಧಕರು ಅಲ್ಲಿ ಕೆಲಸ ಮಾಡುತ್ತಿದ್ದಾರೆ.

ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯ ಸಮಸ್ಯೆಗಳು

170 (882) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯನ್ನು ನೂರು ಹಾಸಿಗೆಗೆ ಮೇಲ್ದರ್ಜೆಗೇರಿಸಿದ್ದರೂ, ಅದಕ್ಕೆ ತಕ್ಕ ಸಿಬ್ಬಂದಿ ಹುದ್ದೆ ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯಲ್ಲಿ ಪದೇ ಪದೇ ವಿದ್ಯುತ್ ಶಾರ್ಟ್ ಸರ್ಕೀಟ್ ಆಗಿ ಉಪಕರಣಗಳು ಸುಟ್ಟುಹೋಗುತ್ತಿರುವುದು ಹಾಗೂ ಆಸ್ಪತ್ರೆ ಆವರಣದ ಬೀದಿ ದೀಪಗಳು ಕೆಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ದೋಷಪೂರಿತ ವಿದ್ಯುತ್ ವೈರಿಂಗ್ ಕಾರಣವೇ.

ಇ) ಹೌದಾದಲ್ಲಿ ವೈರಿಂಗ್ ಮಾಡಿದ ಗುತ್ತಿಗೆದಾರರಿಂದ ದೋಷ ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಈ) ಜೆ.ಸಿ. ಆಸ್ಪತ್ರೆಯ ತುರ್ತು ಚಿಕಿತ್ಸಾ ಕೊಠಡಿ ಬಹಳ ಕಿರಿದಾಗಿದ್ದು ಗಾಲಿ ಖುರ್ಚಿ ಒಳಗೆ ತೆಗೆದುಕೊಂಡು ಹೋಗುವುದು ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕೊಠಡಿ ವಿಸ್ತಾರ ಮಾಡಲು ಸರ್ಕಾರ ತಕ್ಷಣ ಕ್ರಮಕೈಗೊಳ್ಳುವುದೇ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಈವರೆಗೆ ಸದರಿ ಆಸ್ಪತ್ರೆಯು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿದ್ದು, ದಿನಾಂಕ: 04.01.2006ರ ಸರ್ಕಾರದ ಆದೇಶದ ಮೇರೆಗೆ ಮೇಲ್ದಜೆಗೇರಿಸಲ್ಪಟ್ಟಿದೆ.